ಅನುಪಮಾ ಪ್ರಸಾದ್

# ಸೈತಾನನ ಬಲೆ



ಸಂಜೆಯ ಮಾಸಲು ಬೆಳಕಿಗೆ ಮುಸುಕು ಹಾಕುವಂತೆ ಅಕಾಲದ ಮಳೆ ಹನಿಯುತ್ತಿತ್ತು. ಹೆಡ್‌ಲೈಟ್ ಹಾಕುವಂತೆಯೂ ಇಲ್ಲ. ಹಾಕದಿರುವಂತೆಯೂ ಇಲ್ಲ ಅನ್ನುವ ಸ್ಥಿತಿ. ಈ ದಿನ ಶಾಲಾ ಕಾಲೇಜುಗಳಿಗೆ, ಗವರ್ನ್ಮೆಂಟ್ ಆಫೀಸುಗಳಿಗೆ ರಜೆಯಾದ್ದರಿಂದ ಲಾಸ್ಟ್ ಟ್ರಿಪ್ಪಿಗೆ ಜನವೇ ಇರಲಿಲ್ಲ. ನಾಲ್ಕೈದು ಸೀಟಿನ ಹೊರತಾಗಿ ಪೂರ್ತಿ ಬಸ್ಸು ಖಾಲಿ. ಪೇಟೆಯಿಂದ ಹೊರಗೆ ಬರುವವರೆಗೂ, ಎಲ್ಲಾ ಸ್ಟಾಪ್‌ಗಳಲ್ಲು ಪ್ಯಾಸೆಂಜರ್ ಸಿಗಬಹುದೇನೋ ಎಂಬ ನಿರೀಕ್ಷೆಯಲ್ಲಿ ಅರ್ಧರ್ಧ ನಿಮಿಷ ತಡ ಮಾಡಿದ್ದರ ಪರಿಣಾಮ, ಹಿಂದಿನಿಂದ ತನ್ನ ನಂತರ ಐದು ನಿಮಿಷದ ಅಂತರದಲ್ಲಿ ಹೊರಡುವ ಹನುಮಾನ್ ಸರ್ವಿಸ್ ಹಾರ್ನ್ ಕೇಳಿಬಿಟ್ಟಿತ್ತು. ಆ ಹಾರ್ನಿನ ಕರ್ಕಶ ಧ್ವನಿಯಲ್ಲೇ ಆ ಡ್ರೈವರ್ ತನ್ನನ್ನು ಅಡ್ಡ ಹಾಕಲು ಬರುತ್ತಿದ್ದಾನೆಂದು ಅರ್ಥವಾಗಿ ಹೋಗಿತ್ತು ಸುರೇಶನಿಗೆ. ಆತನ ಕೈಗೆ ಸಿಕ್ಕಿಬಿದ್ದರೆ ಹೊಯ್‌ಕೈ ಗ್ಯಾರಂಟಿ. ಮನೆ ಮಂದಿಗೆ ಇವತ್ತು ಸಿನಿಮಾಕ್ಕೆ ಕರೆದುಕೊಂಡು ಹೋಗುವ ಮಾತು ಕೊಟ್ಟಾಗಿದೆ. ಚಿಲ್ಲರೆ ಪೈಸೆಯ ಆಸೆಗೆ ಎಡವಟ್ಟು ಮಾಡಿಕೊಂಡುಬಿಟ್ಟೆ ಅನಿಸಿತು ಸುರೇಶನಿಗೆ. ತಪ್ಪು ತನ್ನದೇ ಆಗಿದ್ದರಿಂದ ತಪ್ಪಿಸಿಕೊಂಡು ಹೋದರೇ ಬಚಾವ್ ಅಂದುಕೊಂಡು ಜೀವ ಒತ್ತೆ ಇಟ್ಟು ಎಕ್ಸಿಲೇಟರ್ ಮೆಟ್ಟಿದ್ದ. ಅವನಿಗೆ ಪಕ್ಕನೆ ತಾನು ಡ್ರೈವರ್ ಕೆಲಸಕ್ಕೆ ಸೇರಿದ ಹೊಸತರಲ್ಲಿ ಫಕೀರಿಚ್ಚ ಹೇಳಿದ ಮಾತು ನೆನಪಾಯ್ತು. ಇಂತದೇ ಸಂದರ್ಭದಲ್ಲಿ ಆಗ ಬಸ್ಸಿನಲ್ಲೇ ಇದ್ದ ಫಕೀರಿಚ್ಚ, "ಸೈತಾನನ ಕೈಯಲ್ಲಿ ಸಿಕ್ಕಿಕೊಳ್ಳುವುದು ಅಂದ್ರೆ ಹೀಗೇ ಸುರೇಶ. ಬೆನ್ನಟ್ಟದೆ ಬೆನ್ನಟ್ಟಿಸಿಕೊಳ್ಳದೆ ಹೋಗ್ತಾ ಇರ್ಬೇಕು" ಅಂದಿದ್ದ. ಅರ್ಥವಾಗದೆ ಪಿಳಿಪಿಳಿ ಮಾಡಿದಾಗ, "ಮಾಡಬಾರದ್ದದನ್ನು ನಮ್ಮಿಂದ ಮಾಡಿಸ್ಲಿಕ್ಕೆ ಸೈತಾನ ಕಾಯ್ತಾ ಇರ್ತಾನೆ. ನಾವು ಅವನ ಕೈಯಲ್ಲಿ ಸಿಕ್ಕಿಬೀಳ್ಬಾರ್ದು" ಅಂದಿದ್ದ. ಇದರಲ್ಲಿ ಮಾಡಬಾರದ್ದು ಅಂದ್ರೆ ಎಂತದಪ್ಪ? ನಾನೇನು ಹಿಂದಿನವನು ಬರುವವರೆಗೆ ನಿಲ್ಲಲಿಲ್ಲ. ಪೆಟ್ಟುಕುಟ್ಟು ಮಾಡ್ಲಿಲ್ಲ. ಸ್ವಲ್ಪ ಟ್ರಿಕ್ ಉಪಯೋಗಿಸಿದೆ. ಹಾಗೆ ಮಾಡಿದ್ದು ನಮಗೇ ಲಾಭ ಆಗ್ಲಿ ಅಂತಲ್ವ! ಸುಮ್ಮನೆ ಅಲ್ಲ ಈ ಫಕೀರಿಚ್ಚನಿಗೆ ಒಂದು ಸುತ್ತು ಲೂಸು ಅಂತ ಎಲ್ಲರೂ ಹೇಳುವುದು ಅಂದುಕೊಂಡು